ಉಪಾಧ್ಯಕ್ಷರು : ಪ್ರಶ್ನೋತ್ತರ ಮುಗಿದ ಮೇಲೆ ಅದನ್ನು ತೆಗೆದುಕೊಳ್ಳೋಣ.

ರೈತರ ಬೆಳೆ ನಾಶವಾಗಿರುವ ಬಗ್ಗೆ ಸದನದ ಸಮಿತಿಯ ವರದಿ ಮೇಲೆ ಚರ್ಚೆ

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಸಭಾಧ್ಯಕ್ಷರೆ, ಮತ್ತೊಂದು ಮುಖ್ಯವಾದ ವಿಚಾರವೊಂದಿದೆ. ತಾವು ಪ್ರಶ್ನೋತ್ತರ ವೇಳೆಯ ನಂತರ ಅದರ ಬಗ್ಗೆ ತೆಗೆದುಕೊಳ್ಳುವುದಾದರೆ ಎರಡು ಮಾತಿಲ್ಲ. ರಾಜ್ಯಪಾಲರ ಭಾಷಣದಲ್ಲೂ ಇದರ ಬಗ್ಗೆ ಪ್ರಸ್ತಾಪವಾಗಿದೆ. ಬೆಳೆ ನಾಶವಾಗಿ ಸಾಲವನ್ನು ಕಟ್ಟಲಾರದೆ ಅನೇಕ ಜನ ರೈತರು ಪ್ರಾಣವನ್ನು ಕಳೆದುಕೊಂಡಿದ್ದಾರೆ. ಇದರ ಬಗ್ಗೆ ವರದಿ ಮಾಡಲು ಸದನದ ಸಮಿತಿಯನ್ನು ಅಲ್ಲಿಗೆ ಕಳುಹಿಸಿಕೊಡಲಾಗಿತ್ತು. ತಾವು ಇದರ ಬಗ್ಗೆ ಹೆಚ್ಚು ಮಹತ್ವವನ್ನು ಕೊಟ್ಟು ಚರ್ಚೆಮಾಡಲು ಅವಕಾಶ ಮಾಡಿಕೊಡಬೇಕು. ಸದನದ ಸಮಿತಿಯವರು ಏನು ವರದಿ ಕೊಟ್ಟಿದ್ದಾರೆ, ಏನು ನೋಡಿಕೊಂಡು ಬಂದಿದ್ದಾರೆ, ಏನು ಸಲಹೆ ಕೊಟ್ಟಿದ್ದಾರೆ, ಸರ್ಕಾರವೇನು ಇದುವರೆಗೆ ಮಾಡಿದ್ದಾರೆ ಎಂಬ ಬಗ್ಗೆ ಮೊದಲು ಚರ್ಚೆಗೆ ಅವಕಾಶ ಮಾಡಿಕೊಟ್ಟು ಮಧ್ಯಾಹ್ನ ಪ್ರಶ್ನೋತ್ತರವನ್ನು ತೆಗೆದುಕೊಂಡರು ಪರವಾಗಿಲ್ಲ. ಇದಕ್ಕೆ ಮೊದಲ ಆಧ್ಯತೆ ಕೊಡಿ. ಇದು ಮಹತ್ವವಾದ ವಿಚಾರವಲ್ಲವೆ? ಸದನದ ಸಮಿತಿ ಕಳುಹಿಸಿಕೊಟ್ಟಿದ್ದೇವೆ, ಅವರು ತುರ್ತಾಗಿ ವರದಿಯನ್ನು ತಂದು ಕೊಟ್ಟಿದ್ದಾರೆ, ಸರ್ಕಾರವೇನು ಕ್ರಮ ತೆಗೆದುಕೊಂಡಿದೆ?

ಉಪಾಧ್ಯಕ್ಷರು : ಮೊದಲು ಪ್ರಶ್ನೋತ್ತರ ತೆಗೆದುಕೊಳ್ಳೋಣ, ತಾವು ದಯಮಾಡಿ ಸಹಕಾರ ನೀಡಬೇಕು.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಸದನದ ಸಮಿತಿ ಅಲ್ಲಿಗೆ ಭೇಟಿ ನೀಡಿದೆ. ಅವರು ವಿಷಯವನ್ನು ಸಂಗ್ರಹ ಮಾಡುತ್ತಿದ್ದಾರೆ. ಎರಡೂ ಸದನಗಳಿಗೆ ಒಂದೆರಡು ದಿವಸಗಳಲ್ಲಿ ವರದಿಯನ್ನು ಕೊಡುವವರಿದ್ದಾರೆ. ವರದಿ ಬರದೆ ಇಲ್ಲಿ ಚರ್ಚೆ ಮಾಡುವುದು ಹೇಗೆ ಸಾಧ್ಯ? ವರದಿ ಬರದೆ ಚರ್ಚೆ ಮಾಡಲು ಯಾವ ನಿಯಮದಲ್ಲಿ ಅವಕಾಶವಿದೆ? ನಿಯಮದ ಪ್ರಕಾರ ನಾವು ಸದನದ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಬೇಕಾಗುತ್ತದೆ. ವರದಿ ಇಲ್ಲದೆ ಯಾವ ನಿಯಮದ ಪ್ರಕಾರ ಚರ್ಚೆ ಮಾಡುವುದು?

ಉಪಾಧ್ಯಕ್ಷರು : ನಾವೆಲ್ಲರೂ ಸೇರಿಯೇ ಸದನದ ಸಮಿತಿಯನ್ನು ಅಲ್ಲಿಗೆ ಕಳುಹಿಸಿಕೊಟ್ಟಿದ್ದೇವೆ. ಸದನದ ಸಮಿತಿಯಿಂದ ವರದಿ ಬಂದಮೇಲೆ ಇದರ ಬಗ್ಗೆ ಚರ್ಚೆ ಮಾಡೋಣ. ವರದಿ ಇಲ್ಲದೆ ಚರ್ಚೆ ಮಾಡುವುದಾದರೂ ಹೇಗೆ?

(ಗೊಂದಲ)

ಶ್ರೀ ಸಿ. ಬೈರೇಗೌಡ : ಚರ್ಚೆಗೆ ನಮ್ಮ ಅಭ್ಯಂತರವೇನಿಲ್ಲ, ನಾವು ಇಲ್ಲಿ ನಿಯಮಗಳನ್ನು ಪಾಲನೆ ಮಾಡಬೇಕಲ್ಲವೇ?

ಶ್ರೀ ವಾಟಾಳ್ ನಾಗರಾಜ್ : ಅಲ್ಲಿಗೆ ಸದನದ ಸಮಿತಿ ಹೋಗಿದೆ, ಅದು ತನ್ನ ಮೊದಲ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದೆ.

(ಗೊಂದಲ)

ಇದರ ಪ್ರಾಮುಖ್ಯತೆಯನ್ನು ಗಮನಿಸಿ ಇಂದಿನ ಪ್ರಶ್ನೋತ್ತರ ಕಾಲವನ್ನು ರದ್ದುಪಡಿಸಿ ಅದರ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಬೇಕು. ಅಲ್ಲಿ ಪ್ರತಿದಿನ ರೈತರು ಸಾಯುತ್ತಿದ್ದಾರೆ. ಇಂಥ ಪರಿಸ್ಥಿತಿ ಎಂದೂ ನಿರ್ಮಾಣವಾಗಿರಲಿಲ್ಲ. ಅವರು ಮೊದಲು ವರದಿಯನ್ನು ಮಂಡಿಸಲಿ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಸದನದ ಸಮಿತಿಯು ಇನ್ನೂ ಸಹ ತಾತ್ಕಾಲಿಕ ವರದಿಯನ್ನು ಸರ್ಕಾರಕ್ಕೆ ಕೊಟ್ಟಿಲ್ಲ. ಒಂದರೆಡು ದಿವಸಗಳಲ್ಲಿ ತಾತ್ಕಾಲಿಕ ವರದಿ ತಯಾರಾಗುತ್ತದೆ. ಸದನದ ಸಮಿತಿಯು ವರದಿಯನ್ನು ಕೊಟ್ಟ ಕೂಡಲೇ ಆ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ಸರ್ಕಾರ ಯಾವುದೇ ವಿಧದಲ್ಲಿ ಚರ್ಚೆ ಆಗಬಾರದು ಎನ್ನತಕ್ಕದಕ್ಕೆ ಅಡ್ಡಿ ಬರುವುದಿಲ್ಲ. ಇದರ ಬಗ್ಗೆ ಚರ್ಚೆ ಆಗಬೇಕು. ಆ ಚರ್ಚೆಯನ್ನು ಸರ್ಕಾರ ಬಯಸುತ್ತದೆ. ಆದರೆ ಆ ಚರ್ಚೆಗೆ ಒಂದು ರೀತಿ ನೀತಿ, ನಿಯಮಾವಳಿ ಬೇಡವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಧ್ಯಂತರ ವರದಿಯನ್ನು ಕೊಡಬೇಕು ಎಂಬ ಉದ್ದೇಶದಿಂದಲೇ ಸದನದ ಸಮಿತಿಯನ್ನು ಮಾಡಿದುದ್ದು. ಸಮಿತಿಯು ಮಧ್ಯಂತರ ವರದಿಯನ್ನು ಕೊಟ್ಟಿದ್ದಾರೆಂದು ವರದಿ ಬಂದಿದೆ. ತಾವು ಕೇಂದ್ರದ ಕೃಷಿ ಸಚಿವರಿಗೆ ರಾಜ್ಯ ಸರ್ಕಾರದ ಪರವಾಗಿ ಒಂದು ಪತ್ರವನ್ನು ಬರೆದು ಬೆಳೆ ನಾಶದ ಅಧ್ಯಯನಕ್ಕೆ ಬರುವ ಕೇಂದ್ರ ತಂಡವನ್ನು ಏಪ್ರಿಲ್ 15ರ ನಂತರ ಬನ್ನಿ ಎಂದು ಹೇಳಿದ್ದೀರಿ. ಆ ರೀತಿ ತಾವು ಪತ್ರವನ್ನು ಬರೆಯುವುದಾದರೆ ಇದರ ಮಹತ್ವವೇನು ಬಂತು? ಸದನದ ಸಮಿತಿಯನ್ನು ಒಂದು ಕಡೆ ಕಳುಹಿಸುತ್ತೀರಿ ಮತ್ತೊಂದು ಕಡೆ ಕೇಂದ್ರದ ಅಧ್ಯಯನ ತಂಡವು ಏಪ್ರಿಲ್ 15ರ ನಂತರ ಬನ್ನಿ ಎಂದು ಪತ್ರ ಕೇಂದ್ರಸರ್ಕಾರಕ್ಕೆ ಬರೆಯುತ್ತೀರಿ.

ಶ್ರೀ ಎಂ. ಪಿ. ಪ್ರಕಾಶ್ : ಆ ರೀತಿ ಯಾವುದೇ ಪತ್ರವನ್ನು ಬರೆದಿಲ್ಲ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ತಾವು ವಿಷಯವನ್ನು ತಿಳಿದುಕೊಂಡು ಮಾತನಾಡಿ. ಕೇಂದ್ರದ ಅಧ್ಯಯನ ತಂಡವನ್ನು ಬೇಗನೆ ಕಳುಹಿಸಿಕೊಡಬೇಕೆಂದು ನಾನು ಮತ್ತು ಮಾನ್ಯ ಪ್ರಕಾಶ್‌ರವರು ಹೋಗಿ ವಿನಂತಿ ಮಾಡಿಕೊಂಡಿದ್ದೇವೆ. ಇದರ ಬಗ್ಗೆ ಸಚಿವರಾದ ಬಾಬಾಗೌಡಪಾಟೀಲರ ಜೊತೆ ಚರ್ಚೆ ಮಾಡಿದ್ದೇವೆ. ಅಂದು ಕೇಂದ್ರ ಸರ್ಕಾರದ ಕೃಷಿ ರಾಜ್ಯ ಸಚಿವರು ಇರಲಿಲ್ಲ, ಆಗ ಅವರ ಕಾರ್ಯದರ್ಶಿಯವರನ್ನು ಕರೆದು ಬಾಬಾಗೌಡರವರ ಕೊಠಡಿಯಲ್ಲಿ ಚರ್ಚೆ ಮಾಡಿದ್ದೇವೆ. ತಕ್ಷಣವೇ ಅಧಿಕಾರಿಗಳ ತಂಡವೊಂದನ್ನು ರಾಜ್ಯಕ್ಕೆ ಕಳುಹಿಸಿ ಅಧ್ಯಯನ ಮಾಡಿಸಬೇಕೆಂದು ನಾವೇ ವಿನಂತಿ ಮಾಡಿಕೊಂಡಿದ್ದೇವೆ. ನನ್ನ ಗಮನಕ್ಕೆ ಬಂದಂತೆ ತಾವು ಹೇಳಿದಂತೆ ಆ ರೀತಿಯಾದ ಪತ್ರವನ್ನು ನಾವು ಬರೆದಿಲ್ಲ. ಜಾಗ್ರತೆಯಾಗಿ ಕೇಂದ್ರದ ತಂಡವನ್ನು ಕಳುಹಿಸಬೇಕೆಂಬುದು

ನಮ್ಮ ಒತ್ತಾಯ. ಮಾನ್ಯ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ನಾವುಗಳೆಲ್ಲರೂ ಹೋಗಿದ್ದಂಥ ಸಂದರ್ಭದಲ್ಲಿ ಮಾನ್ಯ ಪ್ರಧಾನಮಂತ್ರಿಯವರ ಗಮನಕ್ಕೂ ಈ ವಿಚಾರವನ್ನು ತಂದಿದ್ದೇವೆ. ಅಂದು ವಿಶ್ವಾಸಮತಯಾಚನೆ ಇದ್ದದ್ದರಿಂದ ಅವರು ನಮಗೆ ಲಭ್ಯವಾಗಲಿಲ್ಲ, ಆದರೆ ಅವರ ಕಛೇರಿಗೆ ನಮ್ಮ ಮನವಿಯನ್ನು ಸಲ್ಲಿಸಿಬಂದಿದ್ದೇವೆ. ಅನಂತರ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಹೋದಂಥ ನಿಯೋಗವು ಆದಷ್ಟು ಜಾಗ್ರತೆಯಾಗಿ ತಂಡವನ್ನು ಕಳುಹಿಸಬೇಕೆಂದು ಪ್ರಧಾನಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡು ಬಂದಿದ್ದೇವೆ. ಇಲ್ಲಿ ಆಗಿರುವ ಅನಾಹುತದ ಸೂಕ್ಷ್ಮ ಪರಿಚಯವನ್ನು ಪ್ರಧಾನಮಂತ್ರಿಯವರಿಗೆ ಮಾಡಿ ಬಂದಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರು ಪ್ರಧಾನಿಯವರಿಗೆ ವಿವರಣೆ ನೀಡಿದ್ದಾರೆ. ಆ ಸಭೆಯಲ್ಲಿ ನಾನೂ ಇದ್ದೆ, ನಾನೂ ಸಹ ರಾಜ್ಯದ ಚಿತ್ರಣವನ್ನು ಪ್ರಧಾನಿಯವರಲ್ಲಿ ಬಿಂಬಿಸತಕ್ಕ ಕೆಲಸವನ್ನು ಮಾಡಿದ್ದೇನೆ. ತಾವು ಹೇಳಿರುವಂತೆ ಆ ರೀತಿಯಾದ ಪತ್ರವನ್ನು ನನಗೆ ತಿಳಿದಿರುವ ಮಟ್ಟಿಗೆ ಬರೆದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಕೇಂದ್ರಕ್ಕೆ ರಾಜ್ಯ ಸರ್ಕಾರದಿಂದ ಏಪ್ರಿಲ್ 15ರ ನಂತರ ಕೇಂದ್ರದ ತಂಡ ಬರಬೇಕೆಂದು ಪತ್ರ ಹೋಗಿದೆಯೆಂದು ಖಚಿತವಾಗಿ ನಾನು ಹೇಳುತ್ತಿದ್ದೇನೆ. ನಾನು, ಕೇಂದ್ರದ ಸಚಿವರಾದಂಥ ಅನಂತಕುಮಾರ್‌ರವರು, ಬಾಬಾಗೌಡ ಪಾಟೀಲರು ವೆಂಕಯ್ಯನಾಯ್ಡು ಕೃಷಿಸಚಿವರನ್ನು ಭೇಟಿ ಮಾಡಿ ರಾಜ್ಯದ ಸ್ಥಿತಿಗತಿಗಳ ಬಗ್ಗೆ ಅವರ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಿದ್ದೇವೆ. ಒಂದು ಸಲ ರಾಜ್ಯಕ್ಕೆ ಬಂದು ಸ್ಥಿತಿಗತಿ ನೋಡಿ ರಾಜ್ಯ ಸರ್ಕಾರದ ಜೊತೆ ಮಾತನಾಡಿ ಪರಿಹಾರವನ್ನು ಕೊಡುವ ಬಗ್ಗೆ ಕ್ರಮ ತೆಗೆದು ಕೊಳ್ಳಬೇಕೆಂದು ಹೇಳಿದೆವು. ಆಗ ಅವರು ನಿಮ್ಮ ರಾಜ್ಯ ಸರ್ಕಾರದಿಂದ ನಮಗೆ ಏಪ್ರಿಲ್ 15ರ ನಂತರ ಕೇಂದ್ರದ ತಂಡವನ್ನು ಕಳುಹಿಸಿಕೊಡಿ ಅದಕ್ಕೂ ಮೊದಲು ಬರಬೇಡಿ ಎಂದು ಅರ್ಥ ಬರುವ ರೀತಿಯಲ್ಲಿ ಪತ್ರ ಬಂದಿದೆ ಎಂದರು. ಎರಡನೆಯದಾಗಿ, ಕೇಂದ್ರದ ತಂಡವು ಈಗಾಗಲೇ ಆಂಧ್ರಕ್ಕೆ ಭೇಟಿ ನೀಡಿ ವರದಿಯನ್ನು ಕೊಟ್ಟಿದೆ. ಅವರು 124 ಕೋಟಿ ಪರಿಹಾರವನ್ನು ನ್ಯಾಚುರಲ್ ಕೆಲಾಮಿಟಿ ಫಂಡ್ ನಿಂದ ಪಡೆದಿದ್ದಾರೆ. 30 ಕೋಟಿ ರೂಪಾಯಿಗಳನ್ನು ಬರಗಾಲ ನಿಧಿಯಿಂದ ಪಡೆದಿದ್ದಾರೆ, 12 ಕೋಟಿ ಫೆಸ್ಟಿಸೈಡ್ ಅಟ್ಯಾಕ್ ಎಂದು ಪಡೆದಿದ್ದಾರೆ. ಆದರೆ ನಮ್ಮ ರಾಜ್ಯ ಸರ್ಕಾರ ಇದುವರೆಗೆ ಕೇವಲ 33 ಕೋಟಿ 12 ಲಕ್ಷ ಮಾತ್ರ. ಶೂನ್ಯವೇಳೆ ಆದಮೇಲೆ ಬೇಕಾದರೆ ತಮಗೆ ಇದರ ಬಗ್ಗೆ ಮಾಹಿತಿ ಒದಗಿಸುತ್ತೇನೆ. ಕೇಂದ್ರದ ಕೃಷಿ ಸಚಿವರು, ಕೇಂದ್ರ ತಂಡವು ರಾಜ್ಯಕ್ಕೆ ಬರಲು ಮಾಹಿತಿ ಒದಗಿಸುತ್ತೇನೆ. ಕೇಂದ್ರದ ಕೃಷಿ ಸಚಿವರು, ಕೇಂದ್ರ ತಂಡವು ರಾಜ್ಯಕ್ಕೆ ಬರಲು ಸಿದ್ದವಾಗಿದೆ, ನಾವೇಕೆ ಅವರಿಗೆ ಏಪ್ರಿಲ್ 15ರ ನಂತರ ಬರಬೇಕೆಂದು ಹೇಳಬೇಕು? ತಾವು ಪತ್ರ ಬರೆದಿರುವ ಬಗ್ಗೆ ಬೇಕಾದರೆ ವಿವರ ಕೊಡುತ್ತೇನೆ. ಬರಗಾಲಕ್ಕೆ 22 ಕೋಟಿ ಕೊಡುತ್ತೇವೆಂದು ಅವರು ತೆಗೆದಿಟ್ಟಿದ್ದರೂ ಸಹ ತಾವು ಅದನ್ನು ಪಡೆದುಕೊಳ್ಳುವ ಪ್ರಯತ್ನವನ್ನು ಸಹ ಮಾಡಿಲ್ಲ. ಇಲ್ಲಿನ ಸ್ಥಿತಿಯನ್ನು ತಿಳಿಸುವುದಕ್ಕೆ ಮೆಮೊರ್ಯಾಂಡಂನ್ನು ಕೊಡುವುದೂ ತಡವಾಯಿತು, ಕೇಂದ್ರದವರಿಗೆ 15ರ ನಂತರ ಬನ್ನಿ ಎಂದು ಏಕೆ ಹೇಳಿದ್ದೀರೋ ನನಗೆ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಯವರಿದ್ದಾರೆ, ದಯಮಾಡಿ ಇದರ ಬಗ್ಗೆ ಪರಿಶೀಲನೆ ಮಾಡಿ ಹೇಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಕರ್ನಾಟಕ ರಾಜ್ಯಕ್ಕೆ ಕಡಿಮೆ ಪರಿಹಾರ ಬಂದಿದೆ ಎಂದು ಸತ್ಯವನ್ನು ಹೇಳಿದ್ದಾರೆ. ಸಂತೋಷ. ಅಂದರೆ ಕರ್ನಾಟಕವನ್ನು ಮಲತಾಯಿಧೋರಣೆಯಲ್ಲಿ ಈ ಸರ್ಕಾರವೂ ಕಾಣುತ್ತದೆಂದು ತೀರ್ಮಾನವಾದಂತಲ್ಲವೆ?

ಉಪಾಧ್ಯಕ್ಷರು : ಈಗ ಮೊದಲು ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳೋಣ. ಅನಂತರ ಇದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ತಾವು ಹೇಳಿದಂತೆ ಪ್ರಶ್ನೋತ್ತರದ ನಂತರ ಇದನ್ನು ತೆಗೆದುಕೊಳ್ಳುವುದಾದರೆ ಅಡ್ಡಿಯೇನಿಲ್ಲ. ಆದರೆ ಅದಕ್ಕೂ ಮೊದಲು ಮಂತ್ರಿಗಳು ಹೇಳಿಕೆಯನ್ನು ಕೊಟ್ಟರೆ ಹೇಗೆ? ಪ್ರಶ್ನೋತ್ತರವನ್ನು ರದ್ದು ಮಾಡಿ ಇದನ್ನು ಚರ್ಚೆಗೆ ತೆಗೆದುಕೊಳ್ಳಿ. ಇಲ್ಲದಿದ್ದರೆ ಪ್ರಶ್ನೋತ್ತರದ ನಂತರ ತೆಗೆದುಕೊಳ್ಳಿ.

ಶ್ರೀ ಎಂ. ಪಿ. ಪ್ರಕಾಶ್ : ಸದನದ ಸಮಿತಿಯವರು ಮಧ್ಯಂತರ ವರದಿಯನ್ನು ಸಲ್ಲಿಸಿದ್ದಾರೆಂದು ಇಲ್ಲಿ ಪ್ರಸ್ತಾಪವಾಗಿದ್ದರಿಂದ, ಆ ರೀತಿ ಮಧ್ಯಂತರ ವರದಿಯನ್ನು ಕೊಟ್ಟಿಲ್ಲವೆಂದು ಅವರು ಹೇಳುವಾಗ ಬೇರೆ ವಿಷಯವನ್ನೂ ಸಹ ಪ್ರಸ್ತಾಪ ಮಾಡಿದ್ದಾರೆ. ತಾವು ಈಗ ದಯಮಾಡಿ ಪ್ರಶ್ನೋತ್ತರವನ್ನು ತೆಗೆದುಕೊಳ್ಳಿ.

ಉಪಾಧ್ಯಕ್ಷರು : ಈಗ ಪ್ರಶ್ನೋತ್ತರಗಳು.

ಪ್ರಶ್ನೋತ್ತರ

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಮತೀಯ ಅಲ್ಪಸಂಖ್ಯಾತರಿಗಾಗಿ ವಸತಿ ಶಾಲೆಗಳು

145 - ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಮತೀಯ ಅಲ್ಪ ಸಂಖ್ಯಾತರ ವಿದ್ಯಾಭ್ಯಾಸಕ್ಕಾಗಿ ಎಷ್ಟು ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ?

ಆ) ಈ ಶಾಲೆಗಳು ಯಾವ ಯಾವ ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗಿದೆ?

ಇ) ಈ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಈ) ಈ ಶಾಲೆಗಳ ಉಸ್ತುವಾರಿಯನ್ನು ಯಾರು ನೋಡಿಕೊಳ್ಳುತ್ತಿದ್ದಾರೆ?